ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ ಕೊಠಡಿಗಳು

99 : (87)

ಶ್ರೀ ಕೆ.ಪಿ. ಬಚ್ಚೇಗೌಡ (ಚಿಕ್ಕಬಳ್ಳಾಪುರ)

ಅ) ಚಿಕ್ಕಬಳ್ಳಾಪುರ ತಾಲ್ಲೂಕಿನ ಅಂಗರೇಖನಹಳ್ಳಿಯಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ಯಾವಾಗ ಪ್ರಾರಂಭಿಸಲಾಯಿತು.

ಆ) ಈ ಪ್ರೌಢಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ ಹಾಗೂ ಯಾವ ಯಾವ ತರಗತಿಗಳು ಕಾರ್ಯ ನಿರ್ವಹಿಸುತ್ತಿವೆ. (ವಿವರ ಒದಗಿಸುವುದು)

ಇ) ಈ ತರಗತಿಗಳು ಹಾಗೂ ವಿದ್ಯಾರ್ಥಿಗಳಿಗನುಗುಣವಾಗಿ ಶಾಲಾ ಕೊಠಡಿ ನಿರ್ಮಿಸಲಾಗಿದೆಯೇ ?

ಈ) ಹಾಗಿಲ್ಲದಿದ್ದಲ್ಲಿ ಸಮರ್ಪಕವಾಗಿ ಶಾಲಾ ಕೊಠಡಿಗಳನ್ನು ನಿರ್ಮಿಸದೆ ಇರಲು ಕಾರಣವೇನು ?

ಉ) ಈ ಪ್ರೌಢಶಾಲೆಯ ವಿಸ್ತರಣೆಗಾಗಿ ಜಮೀನು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಊ) ಹಾಗಿದ್ದಲ್ಲಿ. ಈ ಜಮೀನಿನಲ್ಲಿ ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಎಷ್ಟು ಕೊಠಡಿಗಳನ್ನು ನಿರ್ಮಿಸಲಾಗುವುದು (ಪೂರ್ಣ ವಿವರ ನೀಡುವುದು) ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಅಂಗರೇಖನಹಳ್ಳಿಯಲ್ಲಿ 2006–07ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಪ್ರೌಢಶಾಲೆಯನ್ನು ಪ್ರಾರಂಭಿಸಲಾಯಿತು.

ಆ) ಈ ಪ್ರೌಢಶಾಲೆಯಲ್ಲಿ ಒಟ್ಟು 133 ವಿದ್ಯಾರ್ಥಿಗಳಿರುತ್ತಾರೆ.

8ನೇ ತರಗತಿಯಲ್ಲಿ – 39

9ನೇ ತರಗತಿಯಲ್ಲಿ – 57

10ನೇ ತರಗತಿಯಲ್ಲಿ – 37

ಇ) ತರಗತಿಯ ಮಕ್ಕಳ ಸಂಖ್ಯೆಗನುಗುಣವಾಗಿ ಕೊಠಡಿ ನಿರ್ಮಿಸಲಾಗಿಲ್ಲ.

ಈ) ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ, ಇವರು ಅಂಗರೇಖನಹಳ್ಳಿ ಸರ್ಕಾರಿ ಪ್ರೌಢಶಾಲೆಗೆ ದಿ. 18–08–2010 ರಲ್ಲಿ ಸರ್ವೆ ನಂ. 39 ರಲ್ಲಿ ಎಕರೆ 01.02 ಎಕರೆ ಮತ್ತು ಸರ್ವೆ ನಂ. 40 ರಲ್ಲಿ 00.35 ಎಕರೆ ಜಮೀನು ಒಟ್ಟು 1 ಎಕರೆ 37 ಗುಂಟೆ ಜಮೀನನ್ನು ಮಂಜೂರು ಮಾಡಿರುತ್ತಾರೆ. ಜಿಲ್ಲಾಧಿಕಾರಿಗಳು

ಮಂಜೂರು ಮಾಡಿರುವ ಸದರಿ ಜಮೀನಿನಲ್ಲಿ ಶ್ರೀ ಮರಿಯಪ್ಪ, ಅಂಗರೇಖನಹಳ್ಳಿ ಮತ್ತು ಶ್ರೀ ಆಂಜನೇಯ ಸೇವಾ ಸಮಿತಿ, ಅಂಗರೇಖನಹಳ್ಳಿ ರವರು ಕ್ರಮವಾಗಿ ಓ.ಎಸ್. 539/2010 ಮತ್ತು ಓ.ಎಸ್. 459/2010 ರಲ್ಲಿ ತಮ್ಮ ವಾಸಸ್ಥಳದ ಹಕ್ಕಿನ ಬಗ್ಗೆ ಸ್ಥಳೀಯ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಕರಣ ನ್ಯಾಯಾಲಯದಲ್ಲಿದ್ದ ಪ್ರಯುಕ್ತ ಶಾಲಾ ಕೊಠಡಿಗಳನ್ನು ನಿರ್ಮಿಸಲು ಸಾಧ್ಯವಾಗಿಲ್ಲ.

ಉ) ನಿವೇಶನ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಊ) ಜಿಲ್ಲಾಧಿಕಾರಿಗಳು, ಮಂಜೂರು ಮಾಡಿರುವ ಸದರಿ ಜಮೀನಿನಲ್ಲಿ ಸ್ಥಳೀಯ ನ್ಯಾಯಾಲಯದಲ್ಲಿ ವಾಸಸ್ಥಳ ತಕರಾರು ಇರುವ ಜಾಗವನ್ನು ಹೊರತುಪಡಿಸಿ, ಉಳಿದ ಜಮೀನಿನಲ್ಲಿ 5 ಶಾಲಾ ಕೊಠಡಿಗಳನ್ನು ಅನುದಾನದ ಲಭ್ಯತೆಯನ್ನು ಆಧರಿಸಿ ನಿರ್ಮಿಸಲು ಕ್ರಮ ವಹಿಸಲಾಗುವುದು. ಪ್ರಸ್ತುತ ಸರ್ಕಾರಿ ಪ್ರೌಢಶಾಲೆಯು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಅಂಗರೇಖನಹಳ್ಳಿ ಇಲ್ಲಿನ ಕಟ್ಟಡದಲ್ಲಿ ನಡೆಯುತ್ತಿದೆ.

ಪಶು ವೈದ್ಯಕೀಯ ವಿಶ್ವವಿದ್ಯಾಲಯಕ್ಕೆ ಭೂಸ್ವಾಧೀನ

147 : (244)

ಶ್ರೀ ಪ್ರಕಾಶ್ ಹೆಚ್.ಎಸ್. (ಹಾಸನ)

ಅ) ಹಾಸನ ಪಶುವೈದ್ಯಕೀಯ ವಿಶ್ವವಿದ್ಯಾನಿಲಯಕ್ಕಾಗಿ ಸರ್ಕಾರವು ಜಮೀನು ಸ್ವಾಧೀನ ಮಾಡಿಕೊಂಡಿದ್ದು, ನಂತರ ಹಲವಾರು ಜಮೀನುಗಳನ್ನು ಭೂಸ್ವಾಧೀನ ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಕೈ ಬಿಡಲು ಕಾರಣಗಳೇನು (ಮಾಹಿತಿ ನೀಡುವುದು)

ಶ್ರೀ ರೇವೂನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಹೌದು

ಆ) ಹಾಸನ ಪಶುವೈದ್ಯಕೀಯ ಮಹಾವಿದ್ಯಾಲಯಕ್ಕೆ ಚಿಕ್ಕಹೊನ್ನೇನಹಳ್ಳಿಯಲ್ಲಿ ನಿಗದಿಪಡಿಸಿದ ಭೂಸ್ವಾಧೀನಕ್ಕೆ ರೈತರ ಪ್ರತಿರೋಧದ ಕಾರಣದಿಂದ ಸದರಿ ಭೂಸ್ವಾಧೀನವನ್ನು ಕೈಬಿಟ್ಟು ಶಾಂತಿಗ್ರಾಮಕ್ಕೆ ಸ್ಥಳಾಂತರಿಸುವ ಪ್ರಯತ್ನಕ್ಕೆ ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ನೀಡಲಾಗಿತ್ತು. ಅದಲ್ಲದೇ, ಭೂಸ್ವಾಧೀನದ ಒಟ್ಟು ವಿಸ್ತೀರ್ಣ 152 ಎಕರೆಗಳಿಗೆ ರೂ. 14.92 ಕೋಟಿಗಳನ್ನು ಜಿಲ್ಲಾಡಳಿತದಲ್ಲಿ ಠೇವಣಿ ಇಡಲಾಗಿತ್ತು. ಈ ಭೂಸ್ವಾಧೀನದ ಮುಂದುರುವರೆದ ಹಂತದಲ್ಲಿ ಒಪ್ಪಿಗೆ ಅವಾರ್ಡನಂತೆ